**ಕರ್ನಾಟಕ ಪಶುವೈದ್ಯಕೀಯ ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ.**

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ

ಪಶುವೈದ್ಯಕೀಯ ಮಹಾವಿದ್ಯಾಲಯ
ಪ್ರಾದೇಶಿಕ ಕಚೇರಿ. ಹೆಬ್ಬಾಳ ಆವರಣ
ಬೆಂಗಳೂರು–560 024

ನಂ.ಕಾಅ/ಆವಿ/ಪ್ರಾಆ/ಅನುಪಯುಕ್ತವಸ್ತುಗಳು/2026–27 ದಿನಾಂಕ 14.08.2026

## ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

**ಉಲ್ಲೇಖ : ಆಸ್ತಿ ಅಧಿಕಾರಿಗಳು, ಕಪಪಮೀವಿವಿ, ಬೀದರ ಪತ್ರ ನಂ. ಆಅ/ ಕಪಪಮೀವಿವಿ/ಪವೈಮ–ಬೆಂಗಳೂರು/ಕಾಮಗಾರಿ/2026–27 ದಿನಾಂಕ 09.04.2026**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪಶುವೈದ್ಯಕೀಯ ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ, ಪ್ರಾದೇಶಿಕ ಆವರಣ. ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು. ವಿವಿಧ ವಿಭಾಗಗಳ ಅನುಪಯುಕ್ತ ವಸ್ತುಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ವಿವರ ಈ ಕೆಳಗಿನಂತಿದೆ.

ಈ ಟೆಂಡರ್ ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು **ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಆಸ್ತಿ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರುನಲ್ಲಿ** ರೂ.500.00 (ಐದು ನೂರು ರೂಪಾಯಿಗಳು ಗಳನ್ನು ಮಾತ್ರ) ನಗದು ಮುಖಾಂತರ ಪಾವತಿ ಮಾಡಿ ಮೊಹರಾದ ಖಾಲಿ ಟೆಂಡರ್ ಫಾರಂಗಳನ್ನು ಪಡೆದು ಈ ಕೆಳಗೆ ತೋರಿಸಿದ ಅವಧಿಯಲ್ಲಿ ಸಲ್ಲಿಸಬಹುದಾಗಿದೆ.

| ಕ್ರ.ಸಂ | ವಿವರ | ಸಮಯ |
|---|---|---|
| 1 | ಮೊಹರಾದ ಖಾಲಿ ಫಾರಂಗಳ ವಿತರಣೆ | ದಿನಾಂಕ 24.08.2026 ಬೆಳಿಗ್ಗೆ 10–30 ರಿಂದ 03.09.2026 ರ ಸಂಜೆ 4.00 ಗಂಟೆಯವರೆಗೆ ಮಾತ್ರ |
| 2 | ತುಂಬಿದ ಫಾರಂಗಳನ್ನು ವಾಪಸ್ಸು ಸಲ್ಲಿಸುವ ಕೊನೆಯ ದಿನಾಂಕ | ದಿನಾಂಕ 04.09.2026 ಬೆಳಿಗ್ಗೆ 10–30 ರಿಂದ 07.09.2026 ರ ಸಂಜೆ 4.00 ಗಂಟೆಯವರೆಗೆ ಮಾತ್ರ |
| 3 | ಟೆಂಡರ್ ಹರಾಜು ದಿನಾಂಕ | **08.09.2026 ಬೆಳಿಗ್ಗೆ 11.30 ಗಂಟೆಗೆ** |
| 4 | ಹರಾಜು ನಡೆಯುವ ಸ್ಥಳ | **ಪಶುವೈದ್ಯಕೀಯ ಮಹಾವಿದ್ಯಾಲಯ, ಸಮ್ಮೇಳನ ಸಭಾಂಗಣ. ಹೆಬ್ಬಾಳ, ಬೆಂಗಳೂರು.** |

| ಕ್ರ.ಸಂ | ಸ್ಥಳ ಮತ್ತು ವಿವರ | ಠೇವಣಿ ಮೊತ್ತ |
|---|---|---|
| 1 | ಪಶುವೈದ್ಯಕೀಯ ಮಹಾವಿದ್ಯಾಲಯ ಹೆಬ್ಬಾಳ ಆವರಣ, ಬೆಂಗಳೂರು ಗ್ಯಾರೇಜ್ ಪಕ್ಕದ ಶೆಡ್ ಕಟ್ಟಡದಲ್ಲಿ ಇರುವ ಅನುಪಯುಕ್ತ ವಸ್ತುಗಳು | **ರೂ.25,000.00** |

**ಈ ಕೆಳಕಂಡ ಷರತ್ತುಗಳನ್ನು ಒಪ್ಪುವವರು ಮಾತ್ರ ಟೆಂಡರ್ ಹರಾಜಿನಲ್ಲಿ ಭಾಗವಹಿಸಬಹುದು.**

### ಷರತ್ತುಗಳು

01. ಟೆಂಡರ್ ಸಲ್ಲಿಸುವ ಬಿಡ್ಡುದಾರರು ಲಕೋಟೆಯ ಮೇಲೆ "Tender bid for unserviceable articles" ಎಂದು ನಮೂದಿಸಿ **"The Executive Engineer, Regional Office, Hebbal Bengaluru-560024"** ಇವರಿಗೆ ದಿನಾಂಕ 20.08.2026 ರಂದು ಸಂಜೆ 04.00 ಗಂಟೆಯೊಳಗೆ ಸಲ್ಲಿಸುವುದು. ನಿಗಧಿತ ಸಮಯದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

02. ಪ್ರತಿಯೊಂದು ಟೆಂಡರ ಫಾರಂ ಜೊತೆಗೆ ನಿಗಧಿತ ಮೊತ್ತ **ರೂ.25,000.00** ಡಿ.ಡಿ./ ಬ್ಯಾಂಕರ್ ಚೆಕ್ ಮೂಲಕ **"Assistant Comptroller, Veterinary College, Bengaluru"** ಇವರ ಹೆಸರಿನಲ್ಲಿ ಪಡೆದು ಲಗತ್ತಿಸತಕ್ಕದ್ದು. ಠೇವಣಿ ಮೊತ್ತವನ್ನು ಸಲ್ಲಿಸದ ಅಪೂರ್ಣವಾದ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.

**(ಪು.ತಿ.ನೋ)**

Scanned with OKEN Scanner

03. ಮೊಹರಾದ ಟೆಂಡರನ್ನು ಈ ಕಛೇರಿಗೆ ಕೊಟ್ಟ ಮೇಲೆ ಅವುಗಳನ್ನು ತೆರೆಯುವುದಕ್ಕೆ ಮೊದಲು ಹರಾಜು ನಿಯಮಗಳಂತೆ ಹರಾಜು ಮಾಡಲಾಗುವುದು. ಹರಾಜು ಮುಗಿದ ಕೂಡಲೇ ಮೊಹರಾದ ಟೆಂಡರುಗಳನ್ನು ಬಿಡ್ಡುದಾರರ ಎದುರಿನಲ್ಲಿಯೇ ತೆರೆಯಲಾಗುವುದು, ಒಬ್ಬರೇ ಬಿಡ್ಡುದಾರರು ಟೆಂಡರ್ ಹರಾಜಿನಲ್ಲಿ ಭಾಗವಹಿಸಿದ ಪಕ್ಷದಲ್ಲಿ ಟೆಂಡರಿನಲ್ಲಿ ನಮೂದಿಸಿರುವ ಮೊತ್ತದಲ್ಲಿ ಯಾವುದು ಹೆಚ್ಚೋ ಅದನ್ನು ಪರಿಗಣಿಸಲಾಗುವುದು.

04. ಟೆಂಡರ್‌ನಲ್ಲಿ ಅತಿ ಹೆಚ್ಚಿಗೆ ನಮೂದಿಸಿದ ದರವನ್ನು ಅನುಮೋದಿಸುವ/ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.

05. ಹರಾಜು ಮುಗಿದ ಕೂಡಲೇ ಯಶಸ್ವಿ ಟೆಂಡರುದಾರರು/ಬಿಡ್ಡುದಾರರು ಠೇವಣಿ ಹಣ ಬಿಟ್ಟು ಹರಾಜಿನಲ್ಲಿ ನಿಂತ ಬೆಲೆಯ ಅರ್ಧದಷ್ಟು ಹಣವನ್ನು ಸ್ಥಳದಲ್ಲೇ ಪಾವತಿ ಮಾಡಿ ರಸೀದಿಯನ್ನು ಪಡೆಯಬೇಕು. ಉಳಿದ ಅರ್ಧದಷ್ಟು ಹಣವನ್ನು ಹರಾಜು ನಡೆದ ದಿನದಿಂದ 3 ದಿನಗಳೊಳಗೆ ಪಾವತಿ ಮಾಡಿ ರಶೀದಿಯನ್ನು ಪಡೆಯಬೇಕು.

06. ಯಶಸ್ವಿ ಬಿಡ್ಡುದಾರರು ಹಣ ಕಟ್ಟಲು ವಿಫಲವಾದಲ್ಲಿ ಅವರಿಂದ ಪಡೆದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಎರಡನೇ ಅತಿ ಹೆಚ್ಚಿನ ಬಿಡ್ಡುದಾರರಿಗೆ ಕೊಡಬಹುದು ಇಲ್ಲವೇ ಮರು ಹರಾಜು ನಡೆಸಲು ಕ್ರಮ ತೆಗೆದುಕೊಳ್ಳಲಾಗುವುದು. ಮರು ಹರಾಜಿನಲ್ಲಿ ಉಂಟಾಗುವ ನಷ್ಟವನ್ನು ಅತಿ ಹೆಚ್ಚಿನ ಬಿಡ್ಡುದಾರರೇ ಭರ್ತಿ ಮಾಡಿಕೊಡಬೇಕಾಗುತ್ತದೆ ಮತ್ತು ಅಂತಹ ಸಂದರ್ಭದಲ್ಲಿ ವಸೂಲಿ ಮಾಡಿ ಕಾನೂನಿನ ಕ್ರಮ ಜರುಗಿಸಲಾಗುವುದು. ಒಂದು ವೇಳೆ ಮರು ಹರಾಜಿನಲ್ಲಿ ನಷ್ಟ ಉಂಟಾಗದಿದ್ದರೆ ಈ ಹಣವನ್ನು ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು.

07. ಅನುತ್ತೀರ್ಣರಾದ ಬಿಡ್ಡುದಾರರಿಗೆ ಠೇವಣಿಯಾಗಿಟ್ಟ ಹಣವನ್ನು ಹರಾಜು ಮುಗಿದ ನಂತರ ಹಿಂದಿರುಗಿಸಲಾಗುವುದು. ಇವರುಗಳು ಇದಕ್ಕೆ ಸಂಬಂಧಿಸಿದ ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿ ಹಣವನ್ನು ವಾಪಸ್ಸು ಪಡೆಯತಕ್ಕದ್ದು.

08. ಯಾವ ಕಾರಣವನ್ನೂ ನೀಡದೆ ಹರಾಜು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.

09. ಹರಾಜು ಮುಗಿದ ನಂತರ ಸಂಭವಿಸಬಹುದಾದ ಕಳ್ಳತನದಿಂದಾಗಬಹುದಾದ ನಷ್ಟಕ್ಕೆ ಅಥವಾ ಯಾವುದೇ ಕಾರಣದಿಂದ ಅನುಪಯುಕ್ತ ವಸ್ತುಗಳಿಗೆ ನಷ್ಟವಾದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರುವುದಿಲ್ಲ.

10. ಹರಾಜಿನಲ್ಲಿ ಭಾಗವಹಿಸುವವರು ಅನುಪಯುಕ್ತ ವಸ್ತುಗಳನ್ನು ಠೇವಣಿ ಇಡುವ ಮೊದಲೇ ಕಛೇರಿಯ ಕೆಲಸದ ವೇಳೆಯಲ್ಲಿ ಪರಿಶೀಲಿಸತಕ್ಕದ್ದು ಮತ್ತು ತದನಂತರದಲ್ಲಿ ಉದ್ಭವಿಸುವ ಯಾವುದೇ ತಕರಾರುಗಳಿಗೆ ವಿಶ್ವವಿದ್ಯಾಲಯವು ಹೊಣೆಯಾಗಿರುವುದಿಲ್ಲ.

11. ತೆರಿಗೆ ಸುಂಕ ಇದ್ದ ಪಕ್ಷದಲ್ಲಿ ಬಿಡ್ಡುದಾರರೇ ಕಟ್ಟಬೇಕು.

12. ಅನುಪಯುಕ್ತ ವಸ್ತುಗಳನ್ನು ಎಲ್ಲಿ ಹೇಗಿದೆಯೋ ಹಾಗೆ ಹರಾಜು ಮಾಡಲಾಗುವುದು ಮತ್ತು ಅನುಪಯುಕ್ತ ವಸ್ತುಗಳನ್ನು ಒಯ್ಯಲು ಎಲ್ಲ ವ್ಯವಸ್ಥೆಗಳನ್ನು ಯಶಸ್ವಿ ಬಿಡ್ಡುದಾರರೇ ಮಾಡಿಕೊಳ್ಳತಕ್ಕದು.

13. ಟೆಂಡರ್ ತೆರೆಯುವ ಸಮಯ ಬೆಳಿಗ್ಗೆ 11–30 ಗಂಟೆಗೆ ಸ್ಥಳ: ಸಮ್ಮೇಳನ ಸಭಾಂಗಣ, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು.

14. ಹರಾಜು ಪ್ರಕ್ರಿಯೆಲ್ಲಿ ಟೆಂಡರುದಾರರರಾಗಿ/ಬಿಡ್ಡುದಾರರರಾಗಿ ಕ.ಪ.ಪ.ಮೀ.ವಿ.ವಿಶ್ವವಿದ್ಯಾಲಯದ ಸಿಬ್ಬಂದಿಗಳು (ಖಾಯಂ/ ದಿನಗೂಲಿ ನೌಕರ/ ಗುತ್ತಿಗೆ ಆಧಾರ ಸಿಬ್ಬಂದಿ/ಹೊರಗುತ್ತಿಗೆ ಸಿಬ್ಬಂದಿ) ಭಾಗವಹಿಸುವಂತಿಲ್ಲ. ಈ ಷರತ್ತನ್ನು ಕಡ್ಡಾಯವಾಗಿ ಪಾಲನೆ ಮಾಡುವುದು.

15. ಹರಾಜಿನಲ್ಲಿ ಭಾಗವಹಿಸುವವರು ಅನುಪಯುಕ್ತ ವಸ್ತುಗಳನ್ನು ಕಚೇರಿ ವೇಳೆಯಲ್ಲಿ ದಿನಾಂಕ 24.08.2026 ರಿಂದ 03.09.2026 ವರೆಗೆ ಮಾತ್ರ ನೋಡಬಹುದು. (ಬೆಳಿಗ್ಗೆ 10–30 ರಿಂದ ಮಧ್ಯಾಹ್ನ 1–30 ವರೆಗೆ ಮತ್ತು ಮಧ್ಯಾಹ್ನ 2–00 ರಿಂದ 4.00 ವರೆಗೆ ಮಾತ್ರ ಪರಿಶೀಲಿಸತಕ್ಕದ್ದು.

ಕಾರ್ಯನಿರ್ವಾಹಕ ಅಭಿಯಂತರರು

ಕಾರ್ಯನಿರ್ವಾಹಕ ಅಭಿಯಂತರರು
ಕಪಪಮೀವಿವಿ, ಪ್ರಾದೇಶಿಕ ಕಛೇರಿ
ಬೆಂಗಳೂರು – 560 024

ಪ್ರತಿ ಆದರಪೂರ್ವಕ ಮಾಹಿತಿಗಾಗಿ ಸಲ್ಲಿಸಲಾಗಿದೆ:

1. ಡೀನ್ ಮತು ಆವರಣ ಮುಖ್ಯಸ್ಥರು. ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು.
2. ಡೀನ್. ಹೈನುವಿಜ್ಞಾನ ಮಹಾವಿದ್ಯಾಲಯ. ಹೆಬ್ಬಾಳ, ಬೆಂಗಳೂರು.
3. ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು, ಪಶುವೈದ್ಯಕೀಯ ಮಹಾವಿದ್ಯಾಲಯ. ಬೆಂಗಳೂರು.
4. ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು, ಹೈನು ವಿಜ್ಞಾನ ಮಹಾವಿದ್ಯಾಲಯ. ಬೆಂಗಳೂರು.

ಸೂಚನಾ ಫಲಕಗಳು:

1. ಪಶುವೈದ್ಯಕೀಯ ಮಹಾವಿದ್ಯಾಲಯ ಹೆಬ್ಬಾಳ, ಬೆಂಗಳೂರು.
2. ಹೈನು ವಿಜ್ಞಾನ ಮಹಾವಿದ್ಯಾಲಯ ಹೆಬ್ಬಾಳ, ಬೆಂಗಳೂರು.
3. ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಹೆಬ್ಬಾಳ. ಬೆಂಗಳೂರು.
4. ಗ್ರಂಥಾಲಯ, ಪಶುವೈದ್ಯಕೀಯ ಮಹಾವಿದ್ಯಾಲಯ ಹೆಬ್ಬಾಳ ಆವರಣ. ಬೆಂಗಳೂರು.
5. ಕೃಷ್ಣ ಅತಿಥಿ ಗೃಹ, ಪಶುವೈದ್ಯಕೀಯ ಮಹಾವಿದ್ಯಾಲಯ ಹೆಬ್ಬಾಳ ಆವರಣ. ಬೆಂಗಳೂರು.
6. ಮುಖ್ಯ ಸಂಶೋಧನಾ ಕೇಂದ್ರ, ಹೆಬ್ಬಾಳ, ಆವರಣ ಬೆಂಗಳೂರು.
7. ಕಾವೇರಿ ಅತಿಥಿ ಗೃಹ, ಕೃಷಿ ವಿಶ್ವವಿದ್ಯಾಲಯ, ಯು.ಎ.ಎಸ್. ಜಿ.ಕೆ.ವಿ.ಕೆ. ಹೆಬ್ಬಾಳ ಆವರಣ. ಬೆಂಗಳೂರು.